**ಕರ್ನಾಟಕ ಸರ್ಕಾರ**

**(ಪಿ.ಆರ್.ಪಿ.67)**

**ಹೇಳಿಕೆ ಹಾಳೆ**
**(ಆರ್.ಪಿ.ಸಂಖ್ಯೆ 57)**
**ನಮೂನೆ ಸಂಖ್ಯೆ 4**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸೆಷನ್ಸ್ ಕೇಸ್ ನಂಬರ್ ಃ 21/2021**

ಪ್ರಾಸಾ- 2 ಚಾಸಾ- 3

| | | |
|---|---|---|
| ಸಾಕ್ಷಿದಾರರ ಹೆಸರುಃ | ಃ | ಬಸವರಾಜು |
| ತಂದೆಯ ಹೆಸರುಃ | ಃ | ಸಣ್ಣಪ್ಪ ಯಾನೆ ಈರಪ್ಪ |
| ವಯಸ್ಸುಃ | ಃ | 49 ವರ್ಷ |
| ಉದ್ಯೋಗಃ | ಃ | ಕಟಿಂಗ್ ಶಾಪ್ ನಲ್ಲಿ ಕೆಲಸ |
| ವಾಸಃ | ಃ | ಸ್ವಂತ ಊರು ಕ್ಯಾತನಕೆರೆ ಗ್ರಾಮ, ವಾಸ ಹಳೇಬೀಡು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕಃ 28-10-2024**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ಪ್ರಾಸಾ-1 ಮತ್ತು ಚಾಸಾ-2ರವರ ಪರಿಚಯ ಇದೆ. ನ್ಯಾಯಾಲಯದ ಮುಂದಿರುವ ಆರೋಪಿತರನ ಪರಿಚಯವಿಲ್ಲ. ಕಾನೂನಿನ ಸಂಘರ್ಷಕ್ಕೊಳಗಾದ ಬಾಲಕನ ಪರಿಚಯವಿಲ್ಲ.

2. ಹಳೇಬೀಡಿನ ಜಾವಗಲ್ ರಸ್ತೆಯ ಬಲಭಾಗದಲ್ಲಿ ನನಗೆ ಸೇರಿದ ಸೆಲೂನ್ ಶಾಪ್ ಇದೆ. ನನ್ನ ಅಂಗಡಿಯ ಅಕ್ಕಪಕ್ಕದಲ್ಲಿ ಬೈಕ್ ಗ್ಯಾರೇಜ್ ಇದ್ದು ಮೊದಲು ಅದು ಬಿರಿಯಾನಿ ಹೊಟೇಲ್ ಆಗಿತ್ತು. ಇನ್ನೊಂದು ಪಕ್ಕದಲ್ಲಿ ಬ್ಯಾಟರಿ ಅಂಗಡಿ, ಅದರ ಪಕ್ಕದಲ್ಲಿ ಇನ್ನೊಂದು ಹೊಟೇಲ್ ಇದೆ. ಕಾನೂನಿನ ಸಂಘರ್ಷಕ್ಕೊಳಗಾದ ಬಾಲಕ ಏನು ಕೆಲಸ ಮಾಡುತ್ತಾನೆಂದು ಗೊತ್ತಿಲ್ಲ. ನನ್ನ ಅಂಗಡಿಯ ಪಕ್ಕದಲ್ಲಿ ವೆಲ್ಡಿಂಗ್ ಶಾಪ್ ಇದೆ, ಅದನ್ನು ಯಾರು ನಡೆಸುತ್ತಾರೆಂದು ಗೊತ್ತಿಲ್ಲ.

3 ಪ್ರಾಸಾ-1ರವರಿಗೆ ನ್ಯಾಯಾಲಯದ ಮುಂದಿರುವ 1ನೇ ಆರೋಪಿತ ಮತ್ತು ಕಾನೂನಿನ

ಸಂಘರ್ಷಕ್ಕೊಳಗಾದ ಬಾಲಕನಿಂದ ತೊಂದರೆಯಾದ ವಿಚಾರ ನನಗೆ ಗೊತ್ತಿರುವುದಿಲ್ಲ. ಪ್ರಾಸಾ-1ರವರ ಪ್ಯಾಂಟಿಗೆ ಬಣ್ಣವನ್ನು ಎರಚಿ ಬೆಂಕಿ ಕೊಟ್ಟಿರುವುದನ್ನು ನಾನು ನೋಡಿಲ್ಲ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ಪೊಲೀಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದಿಲ್ಲ. ನ್ಯಾಯಾಲಯದ ಮುಂದಿರುವ ಎಂ.ಒ.1 ರಿಂದ 3ನ್ನು ನಾನು ಈ ಹಿಂದೆ ನೋಡಿಲ್ಲ.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ. ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಅಭಿಯೋಜನೆಯ ಪರ ಕೇಸಿಗೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿಯುವುದು ಕಂಡುಬರುತ್ತದೆ, ಈ ಕಾರಣದಿಂದ ಮಾನ್ಯ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ).**

**ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ಅಭಿಯೋಜಕರಿಂದಃ**

ನನ್ನ ಸೆಲೂನ್ ಶಾಪ್ ಜಾವಗಲ್ ಸರ್ಕಲ್ ನಲ್ಲಿ ಇದೆ ಎಂದರೆ ನಿಜ. ನನ್ನ ಅಂಗಡಿಯ ಪಕ್ಕದಲ್ಲಿ ಇರುವ ವೆಲ್ಡಿಂಗ್ ಶಾಪ್ ಆರೋಪಿತನಿಗೆ ಸೇರಿದ್ದು ಎಂದರೆ ಗೊತ್ತಿಲ್ಲ. ಆರೋಪಿತನ ವೆಲ್ಡಿಂಗ್ ಶಾಪ್ ನಲ್ಲಿ ಕಾನೂನಿನ ಸಂಘರ್ಷಕ್ಕೊಳಗಾದ ಬಾಲಕ ಕೆಲಸ ಮಾಡುತ್ತಿದ್ದ ಎಂದರೆ ಸರಿಯಲ್ಲ. 09.01.2020 ರಂದು ಬೆಳಿಗ್ಗೆಯಿಂದ ಆರೋಪಿತ ಮತ್ತು ಕಾನೂನಿನ ಸಂಘರ್ಷಕ್ಕೊಳಗಾದ ಬಾಲಕ ಕೆಲಸ ಮಾಡುತ್ತಿದ್ದರು ಎಂದರೆ ಗೊತ್ತಿಲ್ಲ. ಸಂಜೆ 5-45 ಗಂಟೆ ಸುಮಾರಿಗೆ ನಾನು ನನ್ನ ಅಂಗಡಿ ಮುಂದೆ ನಿಂತಿದ್ದೆ ಎಂದರೆ ಸರಿಯಲ್ಲ. ಆಗ ಆರೋಪಿತ ಪೇಯಿಂಟ್ ಡಬ್ಬ ಹಿಡಿದುಕೊಂಡು ಡಿಸ್ಟೆಂಪರ್ ಬಣ್ಣ ಬಳಿಯುತ್ತಿದ್ದ ಎಂದರೆ ಗೊತ್ತಿಲ್ಲ. ಅದೇ ಕಾಲಕ್ಕೆ ಪ್ರಾಸಾ-1 ರಸ್ತೆ ಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಎಂದರೆ ಸರಿಯಲ್ಲ. ಆಗ ಆರೋಪಿತ ಏಕಾಏಕಿ ಪ್ರಾಸಾ-1ರವರ ಪ್ಯಾಂಟಿಗೆ ಬಣ್ಣ ಎರಚಿದರು ಎಂದರೆ ಗೊತ್ತಿಲ್ಲ. ಆಗ ಪ್ರಾಸಾ-1 ಯಾಕೆ ಬಣ್ಣ ಎರಚಿದೆ ಎಂದು ಕೇಳಿದರು, ಆಗ ಕಾನೂನಿನ ಸಂಘರ್ಷಕ್ಕೊಳಗಾದ ಬಾಲಕ ಪ್ರಾಸಾ-1ರವರನ್ನು ಉದ್ದೇಶಿಸಿ, ಹೋಗೋ ಸೂಳೆಮಗನೆ ಟಿನ್ನರ್ ಹಾಕಿ ತೊಳೆದುಕೋ ಎಂದು ಬೈದನು ಎಂದರೆ ಸರಿಯಲ್ಲ. ಆಗ ಪ್ರಾಸಾ-1 ಟಿನ್ನರ್ ಹಾಕಿಕೊಂಡು ಪ್ಯಾಂಟು ಒರೆಸುತ್ತಿದ್ದಾಗ, ಕಾನೂನಿನ ಸಂಘರ್ಷಕ್ಕೊಳಗಾದ ಬಾಲಕ ಇದ್ದಕ್ಕಿದ್ದಂತೆ ಬೆಂಕಿಕಡ್ಡಿ ಗೀರಿ ಪ್ರಾಸಾ-1ರವರ ಪ್ಯಾಂಟಿಗೆ ಎಸೆದರು ಎಂದರೆ ನೋಡಿಲ್ಲ. ಆಗ ಏಕಾಏಕಿ ಪ್ಯಾಂಟಿಗೆ ಬೆಂಕಿ ಹತ್ತಿಕೊಂಡಿತು ಎಂದರೆ ನಾನು ನೋಡಿಲ್ಲ. ಆಗ ನಾನು ಮತ್ತು ಚಾಸಾ-2 ಸೇರಿ ನೀರು ಹಾಕಿ ಬೆಂಕಿಯನ್ನು ಆರಿಸಿದೆವು ಎಂದರೆ ಸರಿಯಲ್ಲ. ನಾನು ಪ್ರಾಸಾ-1ರವರ ಪ್ಯಾಂಟು ಎತ್ತಿ ನೋಡಿದಾಗ ಎಡಗಾಲಿನ ಪಾದದಿಂದ

ಮಂಡಿಯವರೆಗೆ ಸುಟ್ಟಿತ್ತು ಹಾಗೂ ಎಡಗೈ ಬೆರಳುಗಳು ಸುಟ್ಟುಹೋಗಿದ್ದವು ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ-2 ಪ್ರಾಸಾ-1ರವರನ್ನು ಹಳೇಬೀಡಿನ ಆಸ್ಪತ್ರೆಗೆ ಕರೆದುಕೊಂಡು ಹೋದೆವು ಎಂದರೆ ಸರಿಯಲ್ಲ.ಅಲ್ಲಿ ಪ್ರಾಸಾ-1ರವರ ತಂದೆಗೆ ಫೋನ್ ಮುಖಾಂತರ ತಿಳಿಸಿದೆವು ಎಂದರೆ ಸರಿಯಲ್ಲ. ಪ್ರಾಸಾ-1ರವರತ ಂದೆ ಹೆಚ್ಚಿನ ಚಿಕಿತ್ಸೆಗೆ ಆತನನ್ನು ಹಾಸನ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದರುಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತ ಮತ್ತು ಕಾನೂನಿನ ಸಂಘರ್ಷಕ್ಕೊಳಗಾದ ಬಾಲಕ ಪ್ರಾಸಾ-1ರವರನ್ನು ಕೊಲೆ ಮಾಡುವ ಉದ್ದೇಶದಿಂದಲೇ ಬಣ್ಣ ಎರಚಿ ಟಿನ್ನರ್ ಹಾಕಿ ತೊಳೆಯಲು ಹೇಳಿ ಬೆಂಕಿ ಹಚ್ಚಿದರು ಎಂದರೆಸ ರಿಯಲ್ಲ. ಈ ಕುರಿತು ನಾನು ದಿನಾಂಕ 11.01.2020ರಂದು ಈಗ ನನಗೆ ಓದಿ ಹೇಳಿದಂತೆ "ದಿನಾಂಕ 09.01.2020ರಂದು -----------------------ತಿಳಿಯಿತು" ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಶಾನೆ ಪಿ-2 ಎಂದು ಗುರುತಿಸಲಾಯಿತು. ಈ ಘಟನೆಯನ್ನು ನಾನು ಪ್ರತ್ಯಕ್ಷವಾಗಿ ನೋಡಿ ನಿಪಿ-2ರಂತೆ ಹೇಳಿಕೆ ನೀಡಿದ್ದರೂ, ಆರೋಪಿತನ ವೆಲ್ಡಿಂಗ್ ಶಾಪ್ ನನ್ನ ಅಂಗಡಿ ಪಕ್ಕದಲ್ಲೇ ಇರುವುದರಿಂದ ಆರೋಪಿತನಿಗೆ ಮತ್ತು ಕಾನೂನಿನ ಸಂಘರ್ಷಕ್ಕೊಳಗಾದ ಬಾಲಕನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ- ಆರೋಪಿಗಳ ಪರ ವಕೀಲರಿಂದಃ-**

ಇಲ್ಲ

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು**)**

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**